ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.300/2020**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃ ವಿರುದ್ಧ ಃ-

ಆರೋಪಿ ನಂ.1ಃ ಸದಾನಂದ ತಂದೆ ತಿಪ್ಪಣ್ಣಾ ಮುಕುಡಿ
ವಃ 30 ವರ್ಷ, ಉಃ ಒಕ್ಕಲುತನ

2 ಅನೀಲ ತಂದೆ ತಿಪ್ಪಣ್ಣಾ ಮುಕುಡಿ
ವಃ 28 ವರ್ಷ, ಉಃ ಒಕ್ಕಲುತನ

ಎಲ್ಲರೂ ಸಾಃ ಹಂದ್ರಕಿ ಗ್ರಾಮ, ತಾಃ ಸೇಡಂ

----

ದೋಷಾರೋಪಣೆ

ನಾನು ಶ್ರೀ ಬಾಲು, ಬಿ.ಎ.,ಎಲ್?ಎಲ್?ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 10-05-2020 ರಂದು ಸಾಯಂಕಾಲ 6.30 ಸುಮಾರಿಗೆ ಸೇಡಂ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಹಂದ್ರಕಿ ಗ್ರಾಮದ ಲೊಕೆಶ್ವರ ಗುಡಿ ಹತ್ತಿರ ಸಾರ್ವಜನಿಕ ರಸ್ತೆಯಲ್ಲಿ ಚಾಸಾ 1 ನೇದ್ದವರು ತಮ್ಮ ಹೊಲದಿಂದ ನಡೆದುಕೊಂಡು ಮನೆಯ ಕಡೆ ಹೋಗುತ್ತಿದ್ದಾಗ ಆರೋಪಿ 1 ಮತ್ತು 2 ನೇದ್ದವರು ಕೂಡಿ ಬಂದು ಚಾಸಾ 1 ನೆದ್ದವನಿಗೆ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 341 ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ, ಆರೋಪಿ 1 ಮತ್ತು 2 ಸೇರಿ , ಚಾಸಾ 1 ನೇದ್ದವರನ್ನು ತಡೆದು ನಿಲ್ಲಿಸಿ, ಜಗಳ ತೆಗೆದು ಆರೋಪಿತರಿಬ್ಬರೂ ಕೂಡಿ ಚಾಸಾ 1 ನೇದ್ದವನ ಜೊತೆಯಲ್ಲಿ ಕುಸ್ತಿಗೆ ಬಿದ್ದು ಆರೋಪಿ 1 ನೆದ್ದವನು ಚಾಸಾ 1 ನೇದ್ದವನಿಗೆ ಮೈ ಮೆಲಿದ್ದ ಬನೀನ ಹಿಡಿದು ಎಳೆದಾಡಿ ಕೈಯಿಂದ ತೆಲೆಗೆ ಹೊಟ್ಟೆಗೆ ಬೆನ್ನಿಗೆ ಇತರಕಡೆ ಹೊಡೆ ಬಡೆ ಮಾಡಿದ್ದು ಆರೋಪಿ 2 ನೇದ್ದವನು ಚಾಸಾ 1 ನೇದ್ದವನಿಗೆ ಬಲಕ್ಕೈ ಹಿಡಿದು ತಿರುವಿದ್ದು ಆ ಮೂಲಕ ಭಾ.ದಂ.ಸಂ.ಕಲಂ 323 ಸಂಗಡ 34 ರಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

22/1/21

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ... ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಚಾಸಾ 1 ನೆದ್ದವರಿಗೆ ತಡೆದು ನಿಲ್ಲಿಸಿ "ಭೋಸಡಿ ... ಮಗನೆ ಎ ವಡ್ಡ ಸೂಳಿ ಮಗನೆ ನಿನಗೆ ಸೊಕ್ಕು ಬಂದಿದೆ ನೀನು ಊರಲ್ಲಿ ನಮ್ಮ ಮಾತು ಕೇಳವುದಿಲ್ಲಾ ... ಮಗನೆ" ಅಂತಾ ಅವಾ... ನಮ್ಮ ಎದುರಾಳಿಯಾದ ಲಾಲಪ್ಪಾ ಮೆಂಬರ ಇತನ ಮಾತು ಕೆಳುತಿ ಮಗನೆ" ಅಂತಾ ಅವಾ... ತ್ಸುಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿರುತ್ತಾರೆ ಆ ಮೂಲ... ಭಾ.ದಂ.ಸಂ. 504 ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅ... ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತ... ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಚಾಸಾ 1 ನೇದ್ದವರೊಂದಿಗೆ ಜಗಳ ತೆಗೆ... ಭೊಸಡಿ ಮಗನೆ ವಡ್ಡ ಊರಲ್ಲಿ ನೀನು ನಾವು ಹೇಳಿದ ಹಾಗೆ ಕೇಳಬೇಕು ಇಲ್ಲದಿದ್ದರೆ ನಿ... ಬಿಡುವುದಿಲ್ಲಾ ಹೊಡೆದು ಕೊಲೆ ಮಾಡುತ್ತೇವೆ ಅಂತಾ ಜೀವದ ಬೇದರಿಕೆ ಹಾಕಿದ್ದು ಆ ಮೂ... ಭಾ.ದಂ.ಸಂ. 506 ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ... ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇ... ನಿರ್ದೇಶಿಸುತ್ತಿದ್ದೇನೆ.

22/1/...

ದಿನಾಂಕ: 22-01-2025

ಪ್ರ.ದ.ನ್ಯಾದಂ. ಸೇಡಂ...